**ಮೂ.ದಾ.ನಂ. 48/2016**

ಪಿ.ಡಬ್ಲ್ಯು.1

(ಇಂದು ದಿನಾಂಕ: **05-08-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ.ಎಮ್.ಎನ್.ಎಸ್. ವಕೀಲರಿಂದಃ**

**1.** ಈ ದಾವೆಯಲ್ಲಿ ನಾನು ಎಲ್ಲಾ ಪ್ರತಿವಾದಿಗಳ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಉಳಿದ ಪ್ರತಿವಾದಿಗಳು ನನಗೆ ಸಾಕ್ಷ್ಯ ನುಡಿಯುವಂತೆ ಯಾವುದೇ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ. ನಮ್ಮ ಪ್ರತಿವಾದ ಪತ್ರವನ್ನು ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. 3ನೇ ಪ್ರತಿವಾದಿ ಹಾಗೂ ನಾನು ಖಾಸಾ ಸಹೋದರರಾಗಿರುತ್ತೇವೆ. 1 ಹಾಗೂ 2ನೇ ಪ್ರತಿವಾದಿಯರು ನನ್ನ ದಾಯಾದಿ ಅಣ್ಣ ತಮ್ಮಂದಿರಾಗಿರುತ್ತಾರೆ. 1 ಹಾಗೂ 2ನೇ ಪ್ರತಿವಾದಿಯರು ಖಾಸಾ ಸಹೋದರರಾಗಿರುತ್ತಾರೆ. 6 ರಿಂದ 8ನೇ ಪ್ರತಿವಾದಿಯರು 1 ಹಾಗೂ 2ನೇ ಪ್ರತಿವಾದಿಯರ ಸಹೋದರಿಯರು ಎಂದರೆ ಸರಿ. ಅವರು ವಿವಾಹವಾಗಿ ಬೇರೆ ಬೇರೆ ಕಡೆಗಳಲ್ಲಿ ವಾಸವಾಗಿದ್ದಾರೆ ಎಂದರೆ ಸರಿ.

**2.** 9ನೇ ಪ್ರತಿವಾದಿಯು 3 ಹಾಗೂ 4ನೇ ಪ್ರತಿವಾದಿಯ ಚಿಕ್ಕಪ್ಪನ ಮಗನಾಗಿರುತ್ತಾನೆ. ವಾದಿ ಹಾಗೂ 1 ರಿಂದ 4ನೇ ಪ್ರತಿವಾದಿಯರು ಕುಟುಂಬಸ್ಥ ರಲ್ಲದೇ ದಾಯಾದಿಯಾಗಿರುತ್ತಾರೆ. 5ನೇ ಪ್ರತಿವಾದಿಯು ನಮ್ಮ ಹಾಗೂ ವಾದಿಯ ಕುಟುಂಬಸ್ಥರು ಅಲ್ಲ ಎಂದರೆ ಸರಿ. ನಾನು ರೈತ ಹಾಗೂ ಸೌಹಾರ್ದ ಸಹಕಾರಿ ಸಂಘದಲ್ಲಿ ಪಿಗ್ಮಿ ಸಂಗ್ರಹಕನಾಗಿ ಕರ್ತವ್ಯವನ್ನು ಮಾಡುತ್ತಿದ್ದೇನೆ.

**3.** ಸರ್ವೆ ನಂಬರ 316 ಹಿಸ್ಸಾ 3, ಸರ್ವೆ ನಂಬರ 314 ಹಿಸ್ಸಾ 1, ಸರ್ವೆ ನಂಬರ 314 ಹಿಸ್ಸಾ 4, ಸರ್ವೆ ನಂಬರ 314 ಹಿಸ್ಸಾ 8, ಸರ್ವೆ ನಂಬರ 315 ಹಿಸ್ಸಾ 2, ಸರ್ವೆ ನಂಬರ 313 ಹಿಸ್ಸಾ 4, ಸರ್ವೆ ನಂಬರ 313 ಹಿಸ್ಸಾ 3, ಸರ್ವೆ ನಂಬರ 372 ಹಿಸ್ಸಾ 7, 8, 9 ಇವುಗಳು ಭಾಗಾಯತ ಸ್ಥಳ ಎಂದರೆ ಸರಿ. ಇವೆಲ್ಲ ಸ್ಥಳ ಮೂಲತಃ ನಮ್ಮ ಹಾಗೂ ವಾದಿಯರ ಒಂದೇ ಕುಟುಂಬದ ಹಕ್ಕಿನ ಸ್ಥಳ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಸರ್ವೆ ನಂಬರಗಳು ನಮ್ಮ ಹಾಗೂ 1 ರಿಂದ 4ನೇ ಪ್ರತಿವಾದಿಯರ ಹಾಗೂ ವಾದಿಯರ ಮೂಲತಃ ಕುಟುಂಬದ ಸ್ಥಳವಾಗಿದ್ದರು ಕೂಡ ಅಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ಸರ್ವೆ ನಂಬರ 313/4, ಸರ್ವೆ ನಂಬರ 314/5, ಸರ್ವೆ ನಂಬರ 315/2 ಸದ್ರಿ ಸ್ಥಳವು 1 ಹಾಗೂ 2ನೇ ಪ್ರತಿವಾದಿಯರ ಹಕ್ಕಿನ ಸ್ಥಳವಾಗಿರುತ್ತದೆ. ನಿಡಿ 1 ಈ ಮೇಲೆ ಹೇಳಿದ ಸರ್ವೆ ನಂಬರಗಳಿಗೆ ನೀಡಿದ ಜಿ.ಪಿ.ಎ ಆಗಿರುತ್ತದೆ ಎಂದರೆ ಸರಿ. ನಿ.ಡಿ.1 ನ್ನು 1 ಹಾಗೂ 2 ನೇ ಪ್ರತಿವಾದಿಯರ ಸಹೋದರಿಯರು 2ನೇ ಪ್ರತಿವಾದಿಗೆ ನೀಡಿರುತ್ತಾರೆ. ನಿ.ಡಿ.1 ನ್ನು ನಾನು 1 ಹಾಗೂ 2ನೇ ಪ್ರತಿವಾದಿಯರ ಬಳಿ ಹೋಗಿ ಕೇಳಿದಾಗ ಅವರು ನನಗೆ ನೀಡಿರುತ್ತಾರೆ. 1 ಹಾಗೂ 2ನೇ ಪ್ರತಿವಾದಿಯರ ಸಹೋದರಿಯರು ನನಗೆ ಜಿ.ಪಿ.ಎ.ಯನ್ನು ಬರೆದುಕೊಟ್ಟಿರುವುದಿಲ್ಲ. ನಿಡಿ 1 ನ್ನು ನನಗೆ ನೀಡದೇ ಇರುವುದರಿಂದ ಅದು ನನಗೆ ಸಂಬಂಧಪಟ್ಟ ದಾಖಲೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದ್ರಿ ದಾಖಲೆಯನ್ನು 1 ಹಾಗೂ 2ನೇ ಪ್ರತಿವಾದಿಯರ ಸಹೋದರಿಯರು ನೀಡಿರುವುದರಿಂದ ನಾನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

**ಮೂ.ದಾ.ನಂ. 48/2016**

ಪಿ.ಡಬ್ಲ್ಯು.1

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ